















ಮತ್ತೊಂದು, ಮರದ ಕಾಂಡಕ್ಕೆ ಆತುಕೊಂಡ ನಾಜೂಕುತನ ಮತ್ತೊಂದರದ್ದು, ಮುಖ ತೋರಿಸಲು ಹಿಂದುಮುಂದು ಮಾಡುತ್ತಿರುವ ಲಜ್ಜೆಯ ಚೆಲುವೂ ಇಲ್ಲುಂಟು – ಮಾರುವೇಷದಲ್ಲಿರುವ ಸುರಲೋಕದ ಜೀವಿಗಳಂತೆ ಈ ಅಣಬೆಗಳು ಕಣ್ಮನ ಸೆಳೆಯುತ್ತವೆ.

ಯಾವ ಅಣಬೆಯನ್ನು ತಿನ್ನಬಹುದು, ಯಾವುದನ್ನು ತಿನ್ನಬಾರದು ಎನ್ನುವ ಜಿಜ್ಞಾಸೆ ಪಕ್ಕಕ್ಕಿರಲಿ; ಕಣ್ಣುಗಳಿಗಂತೂ ಎಲ್ಲ ಅಣಬೆಯೂ ಒಂದು ವಿಶಿಷ್ಟ ಅನುಭವವೇ. ವಿಶಿಷ್ಟ ವಿನ್ಯಾಸ ಹಾಗೂ ರಂಗು ಅಣಬೆಗಳನ್ನು ಮೋಹಕವಾಗಿಸುವುದರ ಜೊತೆಗೆ, ಪರಿಸರದ ಚೆಲುವನ್ನೂ ಉದ್ದೀಪಿಸುವಂತಿರುತ್ತದೆ. ಆದರೇನು ಸುಖ? ಇವುಗಳ ಆಯುಸ್ಸು ಕಡಿಮೆ. ಅರಳಿದ ಕೆಲವು ತಾಸುಗಳಲ್ಲೇ ಈ ಶಿಲೀಂಧ್ರಗಳು ಬಾಡಿ, ಮುದುಡಿ ಮಣ್ಣುಪಾಲಾಗುತ್ತವೆ. ಅಣಬೆಗಳ ಚೆಲುವು ಹಾಗೂ ಸಾವು – ನಮಗೆ ಬದುಕಿನ ಸೌಂದರ್ಯ ಮತ್ತು ನಶ್ವರತೆ ಎರಡನ್ನೂ ಸೂಚಿಸುವಂತಿದೆ ಅಲ್ಲವೇ?

ಪ್ರತಿಕ್ರಿಯಿಸಿ: feedback@sudha.co.in